CW.5 PW.4

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1494/2017

| | |
|---|---|
| ಸಾಕ್ಷಿದಾರರ ಹೆಸರು | ರವಿ ಎಂ |
| ತಂದೆಯ ಹೆಸರು | ಮುದ್ದಯ್ಯ |
| ವಯಸ್ಸು | 37 ವರ್ಷ |
| ವೃತ್ತಿ | ವ್ಯವಸಾಯ |
| ವಿಳಾಸ | ಹುಲಿಸಿದ್ದೇಗೌಡನದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 29.08.2025 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 3 ಮತ್ತು 6 ರವರ ಪರಿಚಯವಿರುತ್ತದೆ. ಉಳಿದವರು ಗೊತ್ತಿಲ್ಲ.

ದಿನಾಂಕ 08.09.2017 ರಂದು ಸುಮ ಎನ್ನುವ ವರಿಗೆ ಬೆಂಗಳೂರು ಕಡೆಯಿಂದ ಒಂದು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ-42-ಎಫ್-610 ಸುಮ ರವರು ಓಡಿಸುತ್ತಿದ್ದ ಸ್ಕೂಟಿ ಸಂಖ್ಯೆ ಕೆಎ-42-ಡಬ್ಲ್ಯೂ -1339 ಇದರ ಬಲಗಡೆಗೆ ಬಸ್ಸಿ ನ ಎಡಭಾಗವು ಗುದ್ದಿ ಅಪಘಾತ ಪಡಿಸಿರುತ್ತದೆ. ಸದರಿ ಅಪಘಾತವು ತುಂಗಣಿ ಗೇಟ್ ಬಳಿ ಆಗಿರುತ್ತದೆ. ಈ ಸಂಬಂಧ ಚಾಸಾ-1 ರವರು ನನಗೆ ಕರೆ ಮಾಡಿ ವಿಷಯ ತಿಳಿಸಿದರು. ಆಗ ಸರ್ಕಾರಿ ಆಸ್ಪತ್ರೆಯಲ್ಲಿ ಚಾಸಾ-2 ಮತ್ತು ಚಾಸಾ-3 ರವರನ್ನು ಸೇರಿಸಿದ್ದರು. ನಾನು ಅಲ್ಲಿಗೆ ಹೋಗಿರುತ್ತೇನೆ. ನಂತರ ಹೆಚ್ಚಿ ನ ಚಿಕಿತ್ಸೆಗಾಗಿ ಎಂದು ಸಂಜಯ್ ಗಾಂಧಿ ಆಸ್ಪತ್ರೆಗೆ ಹೋಗಲು ಸೂಚಿಸಿದ್ದರು. ನಂತರದಲ್ಲಿ ನಾನು ಚಾಸಾ-1 ರವರ ಜೊತೆ ಹೋಗಿ ಪೋಲೀಸರಿಗೆ ದೂರು ಕೊಟ್ಟಿರುತ್ತೇನೆ.

ನಾವು 4 ಗಂಟೆ ಸಮಯದಲ್ಲಿ ದೂರು ಕೊಟ್ಟಿದ್ದು ಪೋಲೀಸರು ಸುಮಾರು 5 ಗಂಟೆಗೆ ಸ್ಥಳಕ್ಕೆ ಕರೆದುಕೊಂಡು ಹೋದರು. ಮಹಜರ್ ನ್ನು ಸುಮಾರು 10 ನಿಮಿಷದ ಕಾಲ ತಯಾರು ಮಾಡಿದರು. ಚಕ್ಕುಬಂದಿ ಬರೆದುಕೊಂಡರು. ನನ್ನ ಜೊತೆ ಸದರಿ ದಿನ ಚಾಸಾ-4 ರವರು ನನ್ನ ಸ್ನೇಹಿತರಾಗಿದ್ದು ಹಾಜರಿದ್ದರು. ಚಾಸಾ-4 ಈಗ ತೀರಿಕೊಂಡಿರುತ್ತಾರೆ. ನಮ್ಮ ಜೊತೆ ಚಾಸಾ-1 ರವರು ಹಾಜರಿದ್ದರು. ಸ್ಥಳದಲ್ಲಿ ನನ್ನ ಮುಂದೆ ಯಾವುದೇ ವಾಹನ ಅಮಾನತು ಪಡಿಸಿಕೊಂಡಿಲ್ಲ ಅದು ಠಾಣೆಯಲ್ಲಿತ್ತು.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಚಾಸಾ-1 ರವರು ನನಗೆ ಕರೆ ಮಾಡಿ ತಿಳಿಸಿದಾಗ ಸುಮಾರು 10.15 ರಿಂದ 10.30 ಆಗಿತ್ತು. ಆಗ ನಾನು ನಮ್ಮ ಊರಿಂದ ಆಸ್ಪತ್ರೆಗೆ ಹೋಗಿರುತ್ತೇನೆ. ನಾವು ಹೋದಾಗ 12 ಗಂಟೆಯಾಗಿತ್ತು. ಚಾಸಾ-2 ಮತ್ತು 3 ರವರು ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ನಾನು ಅವರನ್ನು ನೋಡಿರುತ್ತೇನೆ. ದೂರು ಕೊಟ್ಟ ನಂತರ ಠಾಣೆಯಿಂದ ತುಂಗಣಿ ಗೇಟ್ ಬಳಿ ಪೊಲೀಸರು ಕರೆದುಕೊಂಡು ಬಂದರು. ಮಹಜರ್ ಗೆ ಬರಲು ಪೋಲೀಸರು ನನಗೆ ಯಾವುದೇ ನೋಟೀಸು ಕೊಟ್ಟಿರಲಿಲ್ಲ ಎಂದರೆ ಸರಿ. ನಾವು ಸ್ಥಳಕ್ಕೆ 4 ರಿಂದ 4.30 ಗಂಟೆಗೆ ಹೋಗಿದ್ದೇವು. ಸ್ಥಳದಲ್ಲಿ ಪೋಲೀಸರು ವಿಚಾರಣೆ ಮಾಡಿ ರಸ್ತೆಯನ್ನು ಅಳತೆ ಮಾಡಿ ಬರೆದುಕೊಂಡರು. ಆ ಪೋಲೀಸರ ಹೆಸರು ಗೊತ್ತಿಲ್ಲ. ಸದರಿ ಸ್ಥಳದ ಚಕ್ಕುಬಂದಿ ಹೇಳಲು ನನಗೆ ಗೊತ್ತಿಲ್ಲ. ಸ್ಥಳದಲ್ಲಿ ಗಾಡಿಗೆ ಸಂಬಂಧಿಸಿದಂತೆ ಹಾಗೂ ಇನ್ನಿತರ ಯಾವುದೇ ವಸ್ತುಗಳು ಬಿದ್ದಿರಲಿಲ್ಲ. ಸ್ಥಳದಲ್ಲಿಪೋಲೀಸರು ಯಾವುದೇ ವಾಹನಕ್ಕೆ ಸಂಬಂಧಿಸಿದ ಅಥವಾ ಇನ್ನಿತರ ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿಲ್ಲ ಎಂದರೆ ಸರಿ. ನಾನು ಆ ದಿನ ಸ್ಥಳಕ್ಕೆ ಹೋಗಿರಲಿಲ್ಲ ನನ್ನ ಮುಂದೆ

ಯಾವುದೇ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ನನ್ನ ಸ್ನೇಹಿತ ಎಂದರೆ ಸರಿ. ಆದ್ದರಿಂದ ಅವರಿಗೆ ಸಹಾಯವಾಗಲಿ ಎಂದು ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಕೇವಲ ಚಾಸಾ-2 ಮತ್ತು 3 ರವರಿಗೆ ಪರಿಹಾರ ಸಿಗಲಿ ಎಂಬ ಉದ್ದೇಶದಿಂದ ಆರೋಪಿಯ ತಪ್ಪು ಇಲ್ಲದೇ ಇದ್ದರೂ ಸಹಿತ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**